ರಾಜ್ಯ ಸರ್ಕಾರಕ್ಕೆ ಅರಣ್ಯ ಆದಾಯ ಕಡೆಯಿಂದ ಬರಬೇಕಾದ ಹಣ

೧೦೩. (೨೯೫) ಶ್ರೀ ಎನ್. ಎಂ. ಅಡ್ಯಂತಾಯ (ಸುರತ್ಕಲ್).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

(ಅ) ರಾಜ್ಯ ಸರ್ಕಾರಕ್ಕೆ ''ಅರಣ್ಯ ಆದಾಯ'' ಕಡೆಯಿಂದ ಬರಬೇಕಾಗಿರುವ ಮೊತ್ತ ಎಷ್ಟು ?

(ಆ) ಖಾಸಗಿ ವ್ಯಕ್ತಿಗಳು, ಖಾಸಗೀ ಕಂಪನಿಗಳು ಸರ್ಕಾರೀ ನಿಗಮಗಳು, ಸರ್ಕಾರಿ ಇಲಾಖೆಗಳಿಂದ ರಾಜ್ಯ ಬೊಕ್ಕಸಕ್ಕೆ ಬರಬೇಕಾಗಿರುವ ಬಾಕಿ ಹಣದ ಮೊತ್ತವೆಷ್ಟು ? (ಪ್ರತ್ಯೇಕ ಬಾಕಿ ವಿವರಗಳನ್ನು ಓದಗಿಸುವುದು)

(ಇ) ಈ ಬಾಕಿ ವಸೂಲಾತಿಗಾಗಿ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

(ಅ) ಅರಣ್ಯ ಆದಾಯ ಕಡೆಯಿಂದ ಬರಬೇಕಾಗಿರುವ ಮೊತ್ತ ಸುಮಾರು : ೨೧.೬೨ ಕೋಟಿ ರೂ. ಗಳು.

(ಆ)	(೧)	ಇಲಾಖೆಯ ಕ್ರಮಕ್ಕೆ ಒಳಪಟ್ಟಿರುವ ಮೊತ್ತ	೧೫.೧೬ ಕೋಟಿ
	(೨)	ವಿನಾಯ್ತಿಗೆ ಶಿಫಾರಸ್ಸು ಮಾಡಿರುವ ಮೊತ್ತ	೦.೧೭ ,,
	(೩)	ಸರ್ಕಾರಿ ಇಲಾಖೆಗಳು, ಖಾಸಗಿ ಕಂಪನಿಗಳು, ಸರ್ಕಾರಿ ನಿಗಮಗಳಿಂದ ಬರಬೇಕಾದ ಮೊತ್ತ	೫.೯೬ ಕೋಟಿ
	(೪)	ಕಂದಾಯ ಇಲಾಖೆಗೆ ಕಾನೂನಿನಂತೆ ವಸೂಲಿ ಮಾಡಲು ಕ್ರಮ ತೆಗೆದುಕೊಳ್ಳುವ ಬಗ್ಗೆ ಒಳಪಟ್ಟಿರುವ ಮೊತ್ತ	೦.೩೩ ಕೋಟಿ
		ಒಟ್ಟು	೨೧.೬೨ ಕೋಟಿ

(ಇ) ಅರಣ್ಯ ಇಲಾಖೆಗೆ ಮೇಲೆ ನಮೂದಿಸಿದ ಬಾಕಿದಾರರಿಂದ ಬರಬೇಕಾದ ಮೊತ್ತವನ್ನು ಮುಂದಿನ ಅವಧಿಗಳಲ್ಲಿ ಕಾಲಕಾಲಕ್ಕೆ ಕಾನೂನಿನಂತೆ ವಸೂಲಿ ಮಾಡಲಾಗುತ್ತದೆ.

ರಾಜ್ಯದಲ್ಲಿ ಕಾರ್ಖಾನೆಗಳಿಗೆ ವಿತರಣೆ ಮಾಡುತ್ತಿರುವ ವಿದ್ಯುತ್ ಪೂರೈಕೆಯ ಬಗ್ಗೆ

೧೦೪. (೨೩೪) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

(ಅ) ರಾಜ್ಯದಲ್ಲಿ ಕಾರ್ಖಾನೆಗಳಿಗೆ ಯಾವ ಯಾವ ದರದಲ್ಲಿ ವಿದ್ಯುತ್ ಪೂರೈಕೆ ಮಾಡಲಾಗುವುದು ?

(ಆ) ರಾಜ್ಯದಲ್ಲಿರುವ ಎಲ್ಲಾ ರೀತಿಯ ಕಾರ್ಖಾನೆಗಳಿಗೆ ಒಂದೇ ದರದಲ್ಲಿ ಪೂರೈಕೆ ಮಾಡಲಾಗುವುದೇ ?

(ಇ) ಹಾಗಿದ್ದಲ್ಲಿ ಸದರಿ ಕಾರ್ಖಾನೆಗಳಿಂದ ಸರಕಾರಕ್ಕೆ ಬರಬೇಕಾದ ಬಾಕಿ ಹಣವಷ್ಟು ? (ಕಾರ್ಖಾನೆಗಳ ಹೆಸರು ವಿವರ ಒದಗಿಸುವುದು)

(ಈ) ಸದರಿ ದಿನಕ್ಕೆ ಹಣವನ್ನು ವಸೂಲು ಮಾಡಲಾಗಿದೆಯೇ ? ಅಥವಾ ಮಾಡದೇ ಇರಲು ಕಾರಣಗಳೇನು ?

(ಉ) ಇದರಲ್ಲಿ ಸರ್ಕಾರದ ಹಣ ಪೋಲಾಗಲು ಅಧಿಕಾರಿಗಳು ಶಾಮಿಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಊ) ಹಾಗಿದಲ್ಲಿ ಅಂತಹವರ ಮೇಲೆ ಕೈಗೊಂಡ ಕ್ರಮವೇನು?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

(ಅ) ರಾಜ್ಯದಲ್ಲಿ ಕೈಗಾರಿಕೆಗಳನ್ನು ಸಣ್ಣ ಮಾಶ್ತು ದೊಡ್ಡ ಕೈಗಾರಿಕೆಗಳೆಂದು ವಿಂಗಡಿಸಲಾಗಿದೆ. ಸಣ್ಣ ಕೈಗಾರಿಕೆಗಳನ್ನು ಪುನಃ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳೆಂದು ವಿಂಗಡಿಸಲಾಗಿದೆ. ಮೇಲ್ಕಂಡ ವಿವಿಧ ವರ್ಗಗಳ ಕೈಗಾರಿಕೆಗಳಿಗೆ ಅನ್ವಯವಾಗುವ ವಿದ್ಯುತ್ ದರಗಳು ಕೆಳಕಂಡತಿವೆ.

(೧) ಅತಿ ಸಣ್ಣ ಕೈಗಾರಿಕೆಗಳು :

ನಿಗದಿತ ಶುಲ್ಕ : ಒಂದು ಅಶ್ವ ಶಕ್ತಿಗೆ ಒಂದು ತಿಂಗಳಿಗೆ ೬ ರೂಪಾಯಿಗಳು.

ಮತ್ತು

ವಿದ್ಯುತ್ ದರ : ಒಂದು ಯೂನಿಟ್ಟಿಗೆ ೬೫ ಪೈಸೆಗಳು.

(೨) ಸಣ್ಣ ಕೈಗಾರಿಕೆಗಳು :

ನಿಗದಿತ ಶುಲ್ಕ : ಒಂದು ಅಶ್ವ ಶಕ್ತಿಗೆ ಒಂದು ತಿಂಗಳಿಗೆ ೬ ರೂಪಾಯಿಗಳು.

ಮತ್ತು

ವಿದ್ಯುತ್ ಶುಲ್ಕ : ಒಂದು ಯೂನಿಟ್‌ಗೆ ೯೦ ಪೈಸೆಗಳು

(೩) ದೊಡ್ಡ ಪ್ರಮಾಣದ ಕೈಗಾರಿಕೆಗಳು :

ಡಿಮ್ಯಾಂಡ್ ಶುಲ್ಕ : ಒಂದು ಕಿ.ವಿ.ಎ. ಗೆ ಒಂದು ತಿಂಗಳಿಗೆ ೪೦ ರೂಪಾಯಿಗಳು.

ಮತ್ತು

ವಿದ್ಯುತ್ ದರ : ಒಂದು ಯೂನಿಟ್ಟಿಗೆ ೮೦ ಪೈಸೆಗಳು.

(ಆ) ಇಲ್ಲ. ವಿವಿಧ ವರ್ಗದ ಕಾರ್ಖಾನೆಗಳಿರುವುದರಿಂದ ('ಅ' ನಲ್ಲಿ ತಿಳಿಸಿರುವಂತೆ) ಎಲ್ಲಾ ವರ್ಗದ ಕಾರ್ಖಾನೆಗಳಿಗೂ ಏಕ ರೂಪದ ವಿದ್ಯುತ್ ದರ ಅನ್ವಯಿಸುವುದು ಸೂಕ್ತವಲ್ಲ.

(ಇ) ದಿನಾಂಕ ೩೧-೩-೧೯೮೭ರ ವೇಳೆಗೆ ಮಂಡಳಿಗೆ ಖಾಸಗಿ, ಸರಕಾರ ಇಲಾಖೆಗಳು, ಸರ್ಕಾರಿ ಉದ್ಯಮಗಳು ಇತ್ಯಾದಿಗಳಿಂದ ಒಟ್ಟು ೧೪೯.೪೨ ಕೋಟಿ ರೂಪಾಯಿಗಳು ಬಾಕಿ ಬರಬೇಕಾಗಿದ್ದಿತು. ಇದರಲ್ಲಿ ಕೈಗಾರಿಕೆಗಳಿಂದ ಬರಬೇಕಾದ ಹಣವೂ ಸೇರಿದೆ. ೧೦ ಲಕ್ಷ ರೂ. ಗಳಿಗೆ ಮೀರಿದಂತೆ ಬಾಕಿ ಇರುವ ಪ್ರಮುಖ ಕೈಗಾರಿಕಾ ಬಾಕಿದಾರರ ಪಟ್ಟಿ ಯನ್ನು ಮಾತ್ರ ಅನುಬಂಧದಲ್ಲಿ ನೀಡಿದೆ.

(ಈ) ಬಾಕಿ ಹಣವನ್ನು ವಸೂಲು ಮಾಡಲು ಮಂಡಳಿಯು ನಿಯಮಗಳ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಕೆಲವು ಪ್ರಕರಣಗಳು ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಇರುವುದರಿಂದ ಅವುಗಳ ಬಗ್ಗೆ ಉಗ್ರ ವಸೂಲು ಕ್ರಮ ಕೈಗೊಂಡಿಲ್ಲ. ೧-೪-೮೭ ರಿಂದೀಚೆಗೆ ಬಾಕಿ ಹಣದಲ್ಲಿ ವಸೂಲಾಗಿರುವ ಹಣದ ಬಗ್ಗೆ ವಿವರ ಸಂಗ್ರಹಿಸಲಾಗುತ್ತಿದೆ.

(ಉ) ಮತ್ತು (ಊ) } ಅಧಿಕಾರಿಗಳು ಶಾಮೀಲಾಗಿರುವುದು ಗಮನಕ್ಕೆ ಬಂದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಅನುಬಂಧ

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಪ್ರಧಾನ ಬಾಕಿದಾರರ ಪಟ್ಟಿ

(ಹತ್ತು ಲಕ್ಷ ರೂ. ಗಳಿಗೆ ಮೀರಿದ ಬಾಕಿ ಪ್ರಕರಣಗಳು)

ಕ್ರಮ ಸಂಖ್ಯೆ	ಕಾರ್ಖಾನೆ ಉದ್ಯಮಗಳ ಹೆಸರು	ಬಾಕಿ ಬರಬೇಕಾದ ಹಣದ ಮೊತ್ತ (ಲಕ್ಷ ರೂ.ಗಳಲ್ಲಿ)	ಷರಾ
೧)	ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ಭದ್ರಾವತಿ	೭,೮೫೬.೦೦	
೨)	ಮೈಸೂರು ಕಾಗದದ ಕಾರ್ಖಾನೆ, ಭದ್ರಾವತಿ	೧೬೭.೦೦	
೩)	ಮಂಗಳೂರು ರಾಸಾಯನಿಕ ಮತ್ತು ಗೊಬ್ಬರ ಕಾರ್ಖಾನೆ, ಪಣಂಬೂರು	೧೪೨.೦೦	
೪)	ಕೃಷ್ಣರಾಜೇಂದ್ರ ಕಾರ್ಖಾನೆ, ಮೈಸೂರು	೫೭.೦೦	
೫)	ಕುದುರೇಮುಖ ಕಬ್ಬಿಣ ಅದುರ ಕಂಪನಿ(ಲಿ)	೬೩೭.೦೦	
೬)	ಗಾಲಿ ಮತ್ತು ಅಚ್ಚು ಕಾರ್ಖಾನೆ, ಯಲಹಂಕ	೩೨೭.೦೦	
೭)	ದಾಂಡೇಲಿ ಫೆರೋ ಅಲಾಯ್ಸ್, ದಾಂಡೇಲಿ	೧೬೬.೦೦	
೮)	ತುಂಗಭದ್ರ ಫೈಬರ್ಸ್, ಮುನಿರಾಬಾದ್	೧೨೦.೦೦	
೯)	ಬಳ್ಳಾಪುರ ಉದ್ಯೋಗಗಳು, ಬಿನಾಗ	೫೪.೦೦	
೧೦)	ಆಂದ್ರ ಸ್ಟೀಲ್ಸ್, ಬೆಂಗಳೂರು	೪೪.೦೦	
೧೧)	ನಾಣ್ಯಂ ಸೀಮೆಂಟ್ಸ್, ಬಳ್ಳಾರಿ	೪೪.೦೦	
೧೨)	ರ್ಯಾಪೈಡ್ಸ್, ಸತ್ತೇಗಾಲ, ಮೈಸೂರು	೩೦.೦೦	
೧೩)	ಸಂಡೂರು ಮ್ಯಾಂಗನೀಸ್ ಮತ್ತು ಕಬ್ಬಿಣದ ಅದುರು(ಲಿ) ಹೊಸಪೇಟೆ	೨೩.೦೦	
೧೪)	ಟ್ರಾನ್ಸ್‌ಪೋರ್ಟ್ ಟೈರ್ಸ್ ಲಿ. ಬೆಂಗಳೂರು	೧೧.೦೦	
೧೫)	ಆಮ್ಮಸಂದ್ರ ಸಿಮೆಂಟ್ಸ್, ತುಮಕೂರು	೨೪೩.೦೦	ಪ್ರಕರಣ ನ್ಯಾಯಾಲಯದ ಮುಂದಿದೆ
೧೬)	ಸಂಡೂರು ಮ್ಯಾಂಗನೀಸ್ ಮತ್ತು ಕಬ್ಬಿಣ ಅದುರು(ಲಿ)	೨೫೮.೦೦	"
೧೭)	ಇಂಡಿಯನ್ ಅಲ್ಯುಮಿನಿಯಂ, ಬೆಳಗಾವಿ	೨೦೫ ೦೦	"
೧೮)	ಶಿವಮೊಗ್ಗ ಸ್ಟೀಲ್ಸ್	೩೭.೦೦	"
೧೯)	ಸಿದ್ದೇಶ್ವರ ಟೆಕ್ಸ್‌ಟೈಲ್ಸ್	೨೪.೦೦	"
೨೦)	ಗಣೇಶ ಟೆಕ್ಸ್‌ಟೈಲ್ಸ್	೨೨.೦೦	"
೨೧)	ಬಾಗಲಕೋಟೆ ಉದ್ಯೋಗ	೨೨ ೦೦	"
೨೨)	ಕರ್ನಾಟಕ ಸ್ಪಿನ್‌ಅಯರ್ (ಲಿ), ಬೆಂಗಳೂರು	೨೨.೦೦	"
೨೩)	ಬಿಜಗೆರಿ ಮಿಲ್ಸ್	೧೯.೦೦	"
೨೪)	ಕ್ಯಾಪಸ್ಟಿಲ್ಸ್(ಲಿ)ಬೆಂಗಳೂರು	೧೪.೦೦	"
೨೫)	ಮಾಡರ್ನ್‌ಮಿಲ್ಸ್, ಹುಬ್ಬಳ್ಳಿ	೧೧.೦೦	"
೨೬)	ಸಿಮೆಂಟ್ ಕಾರ್ಪೋರೇಷನ್ ಆಫ್ ಇಂಡಿಯಾ	೧೫.೦೦	"
೨೭)	ಮಹದೇವ ಟೆಕ್ಸ್‌ಟೈಲ್ಸ್	೫೨ ೦೦	"

ಇವುಗಳಲ್ಲದೆ ಇನ್ನೂ ಬಹಳಷ್ಟು ಸಣ್ಣ, ದೊಡ್ಡ ಕೈಗಾರಿಕೆಗಳಿಂದ ಹತ್ತು ಲಕ್ಷ ರೂ. ಗಿಂತಲೂ ಕಡಿಮೆ ಬಾಕಿ ಬರಬೇಕಾದ್ದು ಅವುಗಳ ಸಂಖ್ಯೆ ಅಧಿಕವಾಗಿದೆ, ಆದ್ದರಿಂದ ಅವುಗಳನ್ನು ಪಟ್ಟಿಯಲ್ಲಿ ಸೇರಿಸಲಾಗಿಲ್ಲ.